Supply of Electricity to Pumpsets

*Q.—496. Sri P. ANJANAPPA (Pavagada).—

Will the Minister for Public Works be pleased to state :—

(*a*) whether they are aware that Nagalamadike Hobli is always a drought area ;

(*b*) the number of ryots who have deposited money for the supply of electricity to pumpsets ?

(*c*) the reasons for not yet supplying electricity to the pumpsets even though many people have deposited money ;

(*d*) whether they would take action at least now to supply electricity ?

A.—Sri VEERENDRA PATIL (Minister for Public Works).—

(*a*) No.

(*b*) 42.

(*c*) Parties are not yet ready with their pump installation.

(*d*) Power supply will be given soon after the parties get ready with their pump houses and pump installations.

ಶ್ರೀ ಪಿ. ಆಂಜನಪ್ಪ.—ನಾಗಲಮಡಿಕೆ ಹೋಬಳಿಯು ಯಾವಾಗಲೂ ಕ್ಷಾಮಪೀಡಿತ ಪ್ರದೇಶವಾಗಿರುವುದು ಸರ್ಕಾರದವರಿಗೆ ಗೊತ್ತಿದೆಯೇ ಎಂದು ಕೇಳಿದ್ದಕ್ಕೆ ಗೊತ್ತಿಲ್ಲ ಎಂದು ಹೇಳಿದ್ದಾರೆ. ಇದು ಕ್ಷಾಮಪೀಡಿತ ಪ್ರದೇಶ ಎಂದು ಪ್ರಪಂಚಕ್ಕೇ ಗೊತ್ತಿದೆ. 1965-66 ರಲ್ಲಿ ಇಲ್ಲಿ ಕ್ಷಾಮ ಹೆಚ್ಚಾಗಿ ಅಲ್ಲಿಯ ಜನಗಳಿಗೆ ಇಟ್ಟಿರುವ ಫಸಲು ಫೈಲ್ಯೂರ್ ಆಗಿ ಕಷ್ಟವಾಗಿದೆ. ದನ ಕರುಗಳಿಗೆ ಮೇವು ಹುಲ್ಲು ಇಲ್ಲದೆ ಸಾವಿರಾರು ನತ್ತು ಹೋಗಿವೆ. ರೈತರಿಗೆ ಕಂದಾಯ ಕೊಡಲಕ್ಕೆ ಸಾಧ್ಯವಿಲ್ಲವಿದ್ದರೂ ಕಂದಾಯ ವಸೂಲ್ಮಾಡುತ್ತಿದ್ದಾರೆ. ಇದನ್ನು ಸರ್ಕಾರದವರು ಗಮನದಲ್ಲಿಟ್ಟು ಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

(ಉತ್ತರವಿಲ್ಲ).

———

Registration of S.C. and S.T. Candidates in Regional Employment Exchange.

*Q.—183. Sri S. S. ARAKERI (Ballolli).—

Will the Minister for Home and Labour be pleased to state :—

the total number of S.S.L.C. passed Scheduled Castes and Scheduled Tribes Candidates registered in different regional employment exchanges in the State ?

A.—Sri M. V. RAMA RAO (Minister for Home and Labour).—

3,270 Applicants as on 31st March 1967.

ಶ್ರೀ ಎಸ್. ಎಸ್. ಅರಕೇರಿ.—3,270 ಅಪ್ಲಿಕೇಷನ್ಸ್ ಬಂದಿವೆ ಎಂದು ಹೇಳಿದ್ದೀರಿ. ಎಷ್ಟು ವರ್ಷದಿಂದ ಪೆಂಡಿಂಗ್ ಇವೆ.

ಶ್ರೀ ಎಂ. ವಿ. ರಾಮರಾವ್.— ಹೆಂಡಿಂಗ್ ಇಲ್ಲ. ಲೈವ್ ರಿಜಿಸ್ಟರ್‌ನಲ್ಲಿ ಇದ್ದ ಸಂಖ್ಯೆ ಹೇಳಿದ್ದು.

ಶ್ರೀ ಎಸ್, ಎಸ್. ಅರಕೇರಿ.—ಎಸ್. ಎಸ್. ಎಲ್.ಸಿ. ಆದವರು ಇಲ್ಲ ಎಂದು 18 ಪರ್ಸೆಂಟು ರಿಸರ್ವೇಷನ್ ಎಷ್ಟೋ ಡಿಪಾರ್ಟ್‌ಮೆಂಟುಗಳಲ್ಲಿ ತುಂಬಿಲ್ಲ. ಆಯಾಯ ಡಿಪಾರ್ಟ್‌ಮೆಂಟುಗಳಿಗೆ ಕ್ಯಾಂಡಿಡೇಟುಗಳ ಹೆಸರುಗಳನ್ನು ಕಳುಹಿಸಿಕೊಡುವುದು ಬೇಡವೇ ?

ಶ್ರೀ ಎಂ. ವಿ. ರಾಮರಾವ್.—ಡಿಪಾರ್ಟ್‌ಮೆಂಟಿಗೂ ಇದಕ್ಕೂ ಸಂಬಂಧ ಇಲ್ಲ. ಪಬ್ಲಿಕ್ ಸರ್ವಿಸ್ ಕಮೀಷನ್, ಸ್ಟೇಟ್ ಲೆವಲ್ ರೆಕ್ರೂಟ್‌ಮೆಂಟ್ ಕಮಿಟಿ ಇದನ್ನು ಮಾಡುತ್ತಾ ಇದ್ದಾರೆ. ಬೇರೆ ಬೇರೆ ಡಿವಿಷನಲ್ ರೆಕ್ರೂಟ್‌ಮೆಂಟ್ ಕಮಿಟಿಗಳೂ ಇದನ್ನು ಮಾಡುತ್ತಾ ಇದ್ದಾರೆ. ಸರ್ಕಾರದವರು ಈ ಬಗ್ಗೆ 15 ಪರ್ಸೆಂಟು ಷೆಡ್ಯೂಲ್ ಕ್ಯಾಸ್ಟ್, 3 ಪರ್ಸೆಂಟು ಷೆಡ್ಯೂಲ್ಡ್ ಟ್ರೈಬ್ಸ್ ಮೀನರಾಗಿರತಕ್ಕ ಸ್ಥಾನಗಳನ್ನು ಭರ್ತಿಮಾಡಬೇಕು ಎಂದು ಹೇಳಿದ್ದೇವೆ. ಅವರು ಅದನ್ನು ಪಾಲನೆ ಮಾಡಿದ್ದಾರೆ.

ಶ್ರೀ ಎಸ್ ಎಸ್. ಅರಕೇರಿ.—ಪ್ರತಿಯೊಂದು ಜಿಲ್ಲೆಗೆ ಎಷ್ಟೆಷ್ಟು ಎಸ್. ಎಸ್. ಎಲ್. ಸಿ. ಷೆಡ್ಯೂಲ್ಡ್ ಟ್ರೈಬ್ಸ್ ರಿಜಸ್ಟರ್ ಮಾಡಿದ್ದಾರೆ ಎಂದು ಹೇಳಬಹುದೋ ?

ಶ್ರೀ ಎಂ. ವಿ. ರಾಮರಾವ್.—ಹೇಳುವುದಕ್ಕಾಗುತ್ತದೆ. ಬೇರೆ ಪ್ರಶ್ನೆ ಕಳುಹಿಸಿದರೆ ಇನ್ ಫರ್ಮೇಷನ್ ಕೊಡುತ್ತೇನೆ.

Procurement of Paddy on acrewise basis

*Q.—295. Sri S. BANGARAPPA (Sorab).—

Will the Minister for Food and Civil Supplies be pleased to state :—

(*a*) whether it is not a fact that paddy is being procured acrewise in the State;

(*b*) whether they intend to consider the feasibility of procuring paddy on the basis of yield instead of acrewise as the ryots are put to herdship when crops fail or damaged ?

A.—Sri B. D. JATTI (Minister for Food and Civil Supplies).—

(*a*) Paddy is being procured under a graduated slab system of levy with reference to the extent of the growers holding and its source of irrigation with a provision for the determination of the grower's net assessed surplus.

(*b*) Does not arise.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಬೆಳೆಯುವವರ ಹಿಡುವಳಿಯ ವಿಸ್ತೀರ್ಣ ಮತ್ತು ನೀರಾವರಿಯ ಮೂಲಗಳನ್ನು ಗಣನೆಗೆ ತೆಗೆದುಕೊಂಡು ಇಷ್ಟು ಕೊಡಬೇಕು ಎಂದು ನಿಗದಿ ಮಾಡುತ್ತೇನೆ ಎಂದು ಹೇಳೋಣವಾಗಿದೆ. ಎಕರೆವಾರು ವಿಸ್ತೀರ್ಣ ಹಿಡುವಳಿ ಪರಿಗಣನೆಗೆ ತೆಗೆದುಕೊಳ್ಳುವುದರಿಂದ ಕೆಲವು ಎಕರೆಗಳಲ್ಲಿ ಬೆಳೆ ಬಾರದೇ ಇರುವುದರಿಂದ ತೊಂದರೆಯಾಗುತ್ತಿದೆ. ಎಕರೆ ಆಧಾರ ಬಿಟ್ಟು ಬರೀ ಉತ್ಪತ್ತಿ ಮೇಲೆ ಲೆವಿ ವಸೂಲ್ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

Sri B. D. JATTI.—This is a very good suggestion. I will get it examined.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಧಾನ್ಯವನ್ನು ಎಕರೆವಾರು ಆಧಾರದ ಮೇಲೆ ವಸೂಲ್ಮಾಡುತ್ತಿದ್ದಾರೆ. ನೀರಾವರಿ ಆಧಾರದ ಮೇಲೆ ವಸೂಲ್ಮಾಡುತ್ತಾ ಇಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?